ಪ್ರವಾಸ ಎಂಬುದೊಂದು ಧ್ಯಾನ. ದೈನಿಕದ ಸ್ಥೂಲ ವಿವರಗಳ ಜಗತ್ತಿನಿಂದ ಅದು ನಮ್ಮನ್ನು ಸೂಕ್ಷ್ಮ ಹುಡುಕಾಟಗಳ ವಲಯಕ್ಕೆ ದಾಟಿಸುತ್ತದೆ. ಟೈಮ್‌ಟೇಬಲ್‌ಗಳ ಮೇಲೆ ನಿರ್ಧರಿತವಾಗುವ ನಮ್ಮ ಬದುಕು ಗಡಿಯಾರದ ಮುಳ್ಳುಗಳ ನಡುವೆ ಸಿಕ್ಕಿ ಒದ್ದಾಡುತ್ತಿರುವಾಗ ಸಿದ್ಧ ಚೌಕಟ್ಟುಗಳ ಮೀರಲು ಪ್ರವಾಸ ಒಂದು ಚಿಮ್ಮುಹಲಗೆ. ನಮ್ಮಿಂದಲೇ ನಮ್ಮ ಬಿಡುಗಡೆಯ ತಾಣ. ಈ ಬಿರುಬೇಸಗೆಯ ಏಕತಾನಕ್ಕೆ ತಂಪಾದ ಅನುಭೂತಿಯನ್ನು ಕೊಡಗಿನ ದುಬಾರೆ ಹಾಗೂ ಇರ್ಪು ಜಲಪಾತಗಳ ಅಲೆದಾಟ ನೀಡಿತು.



ಮಕ್ಕಳು ಪರೀಕ್ಷೆಗಳ ಹೊರೆ ಇಳಿಸಿ ರಿಲ್ಯಾಕ್ಸ್ ಆಗಲು ಬಯಸುತ್ತಿದ್ದರು. ನಮಗೂ ಮನುಷ್ಯಲೋಕದ ಮಾಲಿನ್ಯದಿಂದ ಸ್ವಲ್ಪ ದೂರ ನಡೆದುಬರುವ ತುಡಿತವಿತ್ತು. ಮೈಸೂರಿನ ಅಗಲ ರಸ್ತೆಗಳು ಭವ್ಯಕಟ್ಟಡಗಳನ್ನು ದಾಟಿ ಹೋಗುವಾಗ ಅರಮನೆ, ಮಜಬೂತಾದ ಆನೆಗಳು ಅವುಗಳ ಲಯಬದ್ಧವಾದ ಗಾಂಭೀರ್ಯದ ನಡಿಗೆ ಎಲ್ಲವೂ ಸ್ಮೃತಿಪಟಲದಲ್ಲಿ ಮೂಡುತ್ತಿದ್ದವು. ಆನೆಗಳನ್ನು ಪಳಗಿಸುವ ದುಬಾರೆ ಆನೆಕ್ಯಾಂಪ್ ಕಡೆಗೆ ನಮ್ಮ ಪ್ರಯಾಣ ಆರಂಭವಾಯ್ತು. ಮೈಸೂರು, ಹುಣಸೂರು, ಪಿರಿಯಾಪಟ್ಟಣ, ಸಿದ್ದಾಪುರ ಮಾರ್ಗವಾಗಿ ದುಬಾರೆ ತಲುಪಿದಾಗ ಇಳಿಸಂಜೆಯ ಎಳೆ ಬೆಳಕು ಎಲ್ಲೆಡೆ ಆವರಿಸಿತ್ತು. ಕೊಡಗಿನ ಕುಶಾಲನಗರ ಹಾಗೂ ಸಿದ್ದಾಪುರಗಳ ನಡುವೆ ದುಬಾರೆ ಇದೆ. ಕುಶಾಲನಗರದಿಂದ ಸುಮಾರು 15 ಕಿ.ಮೀ. ಒಳದಾರಿಯಲ್ಲಿರುವ ಈ ಪ್ರಸಿದ್ಧ ಆನೆ ತರಬೇತಿ ಕೇಂದ್ರ ವಿರಾಜಪೇಟೆ ತಾಲ್ಲೂಕಿನಲ್ಲಿದೆ. ಕಾವೇರಿ ನದಿ ತಟದಲ್ಲಿರುವ ದುಬಾರೆ, ಸಂರಕ್ಷಿತ ಅರಣ್ಯದ ಒಂದು ಭಾಗ.

ಬೃಹತ್ ಆನೆಗಳನ್ನೇ ಪಳಗಿಸುವ ಮಾವುತ ಎಂಥ ಧೀರನಿರಬಹುದು! ರಾಜಮಹಾರಾಜರ ಕಾಲದ ಆಜಾನುಬಾಹು ವ್ಯಕ್ತಿಗಳನ್ನು ಮಕ್ಕಳು ಕಲ್ಪಿಸಿಕೊಂಡಿದ್ದರು. ಆದರೆ ಅಲ್ಲಿ ಸೊರಗಿದಂತಿದ್ದ ಆನೆಗಳನ್ನು ಸಣಕಲು ಮಾವುತರು ಸಂಭಾಳಿಸುತ್ತಿದ್ದರು! ಆದರೂ ನಮಗೆ ಆನೆಯೆಂಬುದೇ ಸೋಜಿಗ. ವಿವಿಧ ವಯೋಮಾನದ 29 ಆನೆಗಳು ಅಲ್ಲಿ ಮಾವುತರ ಅಂಕೆಯಲ್ಲೇ ಓಡಾಡಿಕೊಂಡಿದ್ದವು. ಅವು ಸೊಂಡಿಲಲ್ಲಿ ಪುಟ್ಟ ಪುಟ್ಟ ಹುಲ್ಲುಮೆದೆಗಳನ್ನು ಎತ್ತಿ ಬಾಯಿಕುಳಿಯೊಳಗೆ ಇಟ್ಟುಕೊಳ್ಳುವುದನ್ನು ನೋಡುವುದೇ ಒಂದು ಚಂದ. ಅವುಗಳಿಗೆ ದಿನಕ್ಕೆ ಸುಮಾರು 15 ಕೆ.ಜಿ.ಯಂತೆ ಭತ್ತ, ಜೋಳಗಳ ಜೊತೆ ಸೊಪ್ಪು ಇತ್ಯಾದಿಗಳನ್ನು ಒದಗಿಸಲಾಗುತ್ತದೆ.

ನಾವು ಹೋದಾಗ ದಿನದ ಕೊನೆಯಲ್ಲೊಮ್ಮೆ ಕೊಡುವ ಬೆಲ್ಲವನ್ನು ಅವು ಚಪ್ಪರಿಸಿ ತಿನ್ನುತ್ತಿದ್ದವು. ತಲೆಮೇಲೆ ಸೊಂಡಿಲಿರಿಸಿ ಆಶೀರ್ವದಿಸುವ, ಬಾಯಲ್ಲಿ ನೀರುತುಂಬಿಕೊಂಡು ಸೊಂಡಿಲಲ್ಲಿ ಪುರ್ರೆಂದು ಎರಚುವ ತರಬೇತಿ ಅವುಗಳಿಗಿದೆ. ಅಲ್ಲಿ ಬಂದ ಮಕ್ಕಳಿಗೆ ಇದೊಂದು ಥ್ರಿಲ್. ಅಲ್ಲಿದ್ದ ಮಾವುತರು ಈ ಆನೆಗಳನ್ನು ಇದು ಹದಿನೈದು ಜನರನ್ನು ಕೊಂದ ಆನೆ, ಇದು ಹತ್ತು ಜನರನ್ನು... ಎಂದೆಲ್ಲ ಅವು ಎಷ್ಟು ನಟೋರಿಯಸ್ ಎಂಬಂತೆ ಪರಿಚಯಿಸುತ್ತಿದ್ದರೆ, ನಮಗವು ಬೆಲ್ಲ ಚಪ್ಪರಿಸುವ ಅಬೋಧ ಮಕ್ಕಳಂತೆ ತೋರುತ್ತಿದ್ದವು. ಅವು ನಮ್ಮ ತಲೆಸವರಿದಾಗ ಅವುಗಳ ದೊರಗು ದೊರಗು ಚರ್ಮವನ್ನು ಮುಟ್ಟಿನೋಡಿದೆವು. ನಮ್ಮನ್ನು ನೋಡಿ ಅವಕ್ಕೆ ಏನನಿಸುತ್ತಿರಬಹುದು? ಸ್ಪರ್ಶದ ಭಾಷೆ ಅರಿಯಲು ನಮಗೆ ಮಿತಿಗಳು ಬಹಳ ಇವೆ. ಅಲ್ಲಿನ ಮಾವುತರೋ ತಮ್ಮದೇ ಮಿಶ್ರಭಾಷೆಯಲ್ಲಿ ಆನೆಗಳೊಟ್ಟಿಗೆ ಸರಾಗ ಸಂಭಾಷಿಸುತ್ತಿದ್ದರು.

ಅಂದು ನಮ್ಮ ಜೊತೆ ಆನೆಗಳ ಕುರಿತು ಸಂಶೋಧನೆ ನಡೆಸಿರುವ ಪರಿಸರ ವಿಜ್ಞಾನಿ ದೀಪಕ್ ಭಟ್ ಇದ್ದರು. ಆನೆಗಳು ಮತ್ತು ಮಾವುತರ ಬದುಕಿನ ಸಂಕೀರ್ಣ ಸ್ಥಿತಿಗಳ ಕುರಿತು ಮಾತು ಹೊರಳಿತು. ಆನೆಗಳನ್ನು ಪಳಗಿಸುವ ಜ್ಞಾನ ಪರಂಪರೆಗೆ ಸುಮಾರು ನಾಲ್ಕು ಸಾವಿರ ವರ್ಷಗಳ ಇತಿಹಾಸವಿದೆಯಂತೆ. ಭಾರತೀಯ ಪುರಾಣ, ದೇವರ ಕುರಿತ ಕಲ್ಪನೆ, ನಂಬಿಕೆಗಳು, ಇತಿಹಾಸ ಕಾಲದ ರಾಜರ ಪ್ರತಿಷ್ಠೆಯ ಪ್ರದರ್ಶನಗಳ ಜೊತೆ ಆನೆಗಳ ಕಥನ ಹಬ್ಬಿಕೊಂಡಿದೆ. ಯುದ್ಧಗಳಲ್ಲಿ ಬಳಕೆಯಾಗುತ್ತಿದ್ದುದಲ್ಲದೇ, ರಾಜರ ಭವ್ಯ ಜೀವನಶೈಲಿ ಹಾಗೂ ಶ್ರೀಮಂತಿಕೆಯ ಪ್ರತೀಕವೂ ಆಗಿ ಆನೆಗಳಿದ್ದವು. ಆನೆಗಳ ಮಾವುತರಿಗೆ ರಾಜನ ನಂತರದ ಬಹುಮರ್ಯಾದೆಯ ಸ್ಥಾನಮಾನಗಳಿದ್ದವು ಎಂದು ಇಂಡಾಲಜಿಸ್ಟರು ಗುರುತಿಸುತ್ತಾರೆ. ದಕ್ಷಿಣ ಭಾರತದ ದೇವಸ್ಥಾನಗಳ ಘನತೆ ಹೆಚ್ಚಿಸುವಲ್ಲಿಯೂ ಆನೆಗಳ ಪಾತ್ರವಿದೆ. ಭಾರತದ ಧರ್ಮ, ಪುರಾಣ, ನಂಬಿಕೆ ಹಾಗೂ ರಾಜಕಾರಣದ ಜಗತ್ತು ಹೀಗೆ ಆನೆಗಳ ಮೂಲಕ ಬೆಸೆದಿದೆ. ಕನ್ನಡದಲ್ಲಿ ಆನೆಗಳ ಕುರಿತಾದ ಪ್ರಾಚೀನ ಗ್ರಂಥ 'ಗಜಶಾಸ್ತ್ರ' ಇರುವಂತೆ, 'ಮಾನಸೋಲ್ಲಾಸ' ಎಂಬ ಕೃತಿಯಲ್ಲೂ ಈ ಕುರಿತ ವಿವರಗಳಿವೆ.

ಆನೆಗಳನ್ನು ಪಳಗಿಸುವ ಪಾರಂಪರಿಕ ಜ್ಞಾನ ಹೊಂದಿರುವ ಜೇನುಕುರುಬರು ಅಲ್ಲಿನ ಮೂಲನಿವಾಸಿಗಳು. ಅವರು ಆಡುವ ವಿಶಿಷ್ಟ ಬುಡಕಟ್ಟು ಭಾಷೆ, ಕನ್ನಡ ಭಾಷೆಯ ಮೂಲಚಹರೆಗಳನ್ನು ಕಾಣಿಸುತ್ತದೆ. ಅಲೆಮಾರಿಗಳಾದ ಜೇನುಕುರುಬರು ಅಲ್ಲಲ್ಲಿ ರಾಗಿ ಕೃಷಿ ಮಾಡುವುದೂ ಉಂಟು. ಆದರೆ ವ್ಯವಸ್ಥಿತವಾಗಿ ಅವರ ಜಮೀನುಗಳಿಲ್ಲ. ಗೆಡ್ಡೆ, ಗೆಣಸುಗಳನ್ನು ಸಂಗ್ರಹಿಸುವ ಅವರು ನೂರಾರು ಜಾತಿಯ ಗೆಣಸುಗಳನ್ನು ಗುರುತಿಸುತ್ತಾರೆ. ಜೇನುತೆಗೆಯುವ ವೃತ್ತಿಯಲ್ಲಿ ಪಳಗಿರುತ್ತಾರೆ. ಬೇಟೆಯಾಡುವಾಗ ದೇವರಗುಡ್ಡರ (ಗುರು) ಆದೇಶ ಪಡೆದೇ ಮುಂದುವರಿಯುತ್ತಾರೆ. ದೇವರು ಹುಲಿ, ಚಿರತೆಗಳ ರೂಪದಲ್ಲಿ ಬಂದು ಆದೇಶ ನೀಡುತ್ತಾನೆಂದು ಅವರ ನಂಬಿಕೆ. ತಮಗೆ ಸಿಕ್ಕ ಬೇಟೆಯನ್ನು ಕನಿಷ್ಠ 12 ಕುಟುಂಬಗಳ ಜೊತೆ ಹಂಚಿ ತಿನ್ನಬೇಕೆಂಬುದು ಅವರ ಸಾಮಾಜಿಕ ನಿಯಮ. ಕಾಡಿನ ಜ್ಞಾನದ ಖಣಿಗಳಾದ ಅವರ ಬಳಿ ಅನೇಕ ಕಥನಗಳ ಗಣಿಯೇ ಇದೆ. ಬ್ರಿಟೀಷರ ಕಾಲದಿಂದಲೂ ಅರಣ್ಯ ಇಲಾಖೆಯೊಂದಿಗೆ ಅವರ